ಎತ್ತೋಣ ಹೇಳಿ" ಎಂದು ನಮ್ಮ ತಂಡವನ್ನು ರೌಡಿ ಬಳಗದ ಲೆವಲ್ಲಿಗೆ ಒಯ್ಯುತ್ತಿದ್ದ. ಹಾಗಂತ ಯಾವ ಹೊಡೆದಾಟದಲ್ಲೂ ಅವನು ಭಾಗವಹಿಸಿದವನಲ್ಲ. ಅನೇಕ ಸಲ ಜಗಳಗಳು ನಡೆದಾಗ ಮೊದಲು ಮಂಗಮಾಯವಾಗುತ್ತಿದ್ದವನು ಅವನೇನೆ. ಆಮೇಲೆ ಕೇಳಿದರೆ, "ಕೊಚ್ಚಲು ಮಚ್ಚು, ತಲೆ ಒಡೆಯಲು ದೊಣ್ಣೆ ತರಲು ಹೋಗಿದ್ದೆ" ಎಂದು ಬುರುಡೆ ಬಿಡುತ್ತಿದ್ದ. ನಮ್ಮ ಶಿವು, "ಅದೆಲ್ಲಾ ತರೋಕೆ ಅಷ್ಟು ದೂರ ಯಾಕೆ ಹೋಗಿದ್ದೆ? ಇಲ್ಲೇ ಟೈಲರ್ ಕತ್ತರಿ ಇತ್ತು ಕೊಡ್ತಿದ್ದೆ. ದೊಣ್ಣೆಗೇನು ಕಮ್ಮಿ, ಅಲ್ನೋಡು ರಿಪೀಸುಗಳ ರಾಶಿ ಇದೆ" ಎಂದು ಕಟ್ಟಿಗೆ ಮಾರುವ ಸುರೇಶಣ್ಣನ ಅಂಗಡಿ ತೋರಿಸುತ್ತಿದ್ದ. "ಹಂಗೆಲ್ಲ ಬೇರೆಯವರ ವೆಪನ್ ಉಪಯೋಗಿಸಬಾರದು ಶಿವಣ್ಣ. ಕೆಲ್ಸಾ ಕ್ಲೀನ್ ಆಗಾಕಿಲ್ಲ. ರೋಷ, ಕತ್ತಿ, ನಮ್ದೆ ಸ್ವಂತಾಗೆ ಇರ್ಬೇಕು" ಅಂತಿದ್ದ. ಇವನು ಮಾತಿನ ವೀರನಷ್ಟೇ ಎಂದು ಬಲ್ಲ ನಾವು ಅವನ ಹೆಸರನ್ನು ಬದಲಾಯಿಸಿ ಮಂಗ್ಯೂಸ್ವರ್ ಎಂದು ಮರು ನಾಮಕರಣ ಮಾಡಿಕೊಂಡಿದ್ದೆವು.

ಮತ್ತೊಬ್ಬ ಗಂಗನರಸ ಕಾಲೇಜಿನಲ್ಲಿ ಅಟೆಂಡರ್ ಆಗಿದ್ದವನು. ಭಾರಿ ಭಾವುಕ ಮನುಷ್ಯ. ಪಾಪ ಪುಣ್ಯಗಳ ಲೆಕ್ಕಾಚಾರದವನು. ಸಿಟ್ಟು ಕಡಿಮೆ. ಬಿಡುವಿದ್ದಾಗ ಪೇಂಟಿಗ್ ಕೆಲಸಕ್ಕೂ ಹೋಗುತ್ತಿದ್ದ. ಅವನ ಜೊತೆ ಕುಳ್ಳಶಿವು ಎಂಬಾತ ಪರಿಚಿತನಾದ. ಅವನೂ ಸುಣ್ಣ ಬಣ್ಣ ಬಳಿಯೋ ಕಾಯಕದವನು. ಹೀಗಾಗಿ ಅವನಿಗೆ ಪೈಂಟರ್ ಶಿವು ಅಂತಿದ್ದೆವು. ಸಂಜೆ ಹೊತ್ತು ಟೈಲರ್ ಅಂಗಡಿಗೆ ಎಲ್ಲಾ ಟಾಕುಟೀಕಾಗಿ ಬಂದರೆ ಪೈಂಟರ್ ಶಿವು ಮಾತ್ರ ತನ್ನ ಅದೇ ಬಣ್ಣ ಮೆತ್ತಿದ ಬಟ್ಟೆಯಲ್ಲೇ ಬರುತ್ತಿದ್ದ. ನೀಟಾಗಿ

